ಇಂದು ದಿನಾಂಕ:06.09.2025 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲು : ಪ್ರತಿವಾದಿ ಪರ ಶ್ರೀ.ಐ.ಆರ್.ಎಸ್. ವಕೀಲರಿಂದಃ**

ನಾನು ಮೂಲತಃ ಬೆಣಗಾಲು ಗ್ರಾಮದವನು. ನಾನು ಅದೇ ಗ್ರಾಮದಲ್ಲಿ ಹುಟ್ಟಿ ಬೆಳೆದಿದ್ದೇನೆ. ನಾನು 7 ನೇ ತರಗತಿ ಓದಿದ್ದೇನೆ. ನಾನು ಬೆಣಗಾಲು ಗ್ರಾಮದಲ್ಲಿ ವಿದ್ಯಾಭ್ಯಾಸ ಮಾಡಿದ್ದೇನೆ. ನನ್ನ ತಂದೆಯ ಹೆಸರು ಈರಯ್ಯ, ಅವರ ತಂದೆಯ ಹೆಸರು ತಿಮ್ಮಯ್ಯ. ಸದರಿ ತಿಮ್ಮಯ್ಯನವರಿಗೆ ನಮ್ಮ ತಂದೆ ಒಬ್ಬರೇ ಮಗ. ನನ್ನ ತಂದೆ ಮತ್ತು ತಾತ ತೀರಿಕೊಂಡಿದ್ದಾರೆ. ತಿಮ್ಮಯ್ಯನವರ ಪತ್ನಿಯ ಹೆಸರು ಕುಳ್ಳಮ್ಮ. ತಿಮ್ಮಯ್ಯ ಯಾವ ದಿನಾಂಕದಂದು ತೀರಿಕೊಂಡಿದ್ದಾರೆ ಎಂದು ಗೊತ್ತಿಲ್ಲ. ನನ್ನ ತಂದೆ ದಿನಾಂಕ 27.10.2014 ರಂದು ತೀರಿಕೊಂಡಿದ್ದಾರೆ. ನನ್ನ ತಂದೆ ಮತ್ತು ತಾತನ ಮರಣ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ. ಕುಳ್ಳಮ್ಮ ದಿನಾಂಕ 14.10.2015 ರಂದು ತೀರಿಕೊಂಡಿದ್ದಾರೆ. ನನ್ನ ಅಜ್ಜಿಯ ಮರಣ ದೃಢೀಕರಣ ಪತ್ರವನ್ನು ಕೊಟ್ಟಿಲ್ಲದಿದ್ದರೂ ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಮ್ಮ ವಂಶವೃಕ್ಷವನ್ನು ಕೊಟ್ಟಿರುವುದಿಲ್ಲ. ವಂಶವೃಕ್ಷವನ್ನು ದಾವೆ ಸಲ್ಲಿಸುವ ಕಾಲಕ್ಕೆ ಹಾಜರುಪಡಿಸಲು ತೊಂದರೆ ಇರುವುದಿಲ್ಲ. ನನ್ನ ತಂದೆ ಬದುಕಿದ್ದಾಗ ಆಧಾರ್ ಕಾರ್ಡ್ ಮಾಡಿಸಿಕೊಂಡಿರಲಿಲ್ಲ. ರೇಷನ್ ಕಾರ್ಡ್ ಇತ್ತು ಅದು ಹಾಳಾಗಿದೆ. ನನ್ನ ವಾದ ಪತ್ರದಲ್ಲಿರುವ ವಿಷಯಗಳು ಗೊತ್ತಿದೆ. ವಾದ ಪತ್ರದಲ್ಲಿರುವ ವಿಷಯಗಳನ್ನು ನಾನೇ ಹೇಳಿ ಬರೆಸಿದ್ದೇನೆ. ನನ್ನ ತಾತ ಮತ್ತು ತಂದೆ ಇಂತಹದ್ದೇ ದಿನಾಂಕದಂದು ಮರಣ ಹೊಂದಿದ್ದಾರೆ, ಅವರ ಮರಣ ದೃಢೀಕರಣ ಪತ್ರಗಳನ್ನು ಹಾಜರುಪಡಿಸಿಲ್ಲ ಎಂದು ವಾದ ಪತ್ರದಲ್ಲಿ ಹೇಳಿಲ್ಲ. ನನ್ನ ತಂದೆಗೆ ರೇಷನ್ ಕಾರ್ಡ್ ಇತ್ತು ಆಧಾರ್ ಕಾರ್ಡ್ ಇರಲಿಲ್ಲ ಎಂದು ನನ್ನ ವಾದ ಪತ್ರದಲ್ಲಿ ಬರೆಸಿಲ್ಲ. ಕುಳ್ಳಮ್ಮ ನನ್ನ ಅಜ್ಜಿ ಎಂದು ತೋರಿಸುವ ವಂಶವೃಕ್ಷ ಹಾಜರುಪಡಿಸಿಲ್ಲ.

ಅವರು ನನ್ನ ಅಜ್ಜಿ ಎಂದು ತೋರಿಸಲು ವಿಲ್ ಮತ್ತು ಆರ್.ಟಿ.ಸಿ., ಮ್ಯುಟೇಷನ್ ಹೊರತುಪಡಿಸಿ ಬೇರೆ ದಾಖಲೆ ಕೊಟ್ಟಿಲ್ಲ. ನನ್ನ ತಾತ ಮತ್ತು ಅಜ್ಜಿ ನಮ್ಮ ಕುಟುಂಬದಲ್ಲಿ ವಾಸವಿದ್ದ ಬಗ್ಗೆ ರೇಷನ್ ಕಾರ್ಡ್ ಹಾಜರುಪಡಿಸಿಲ್ಲ. ನನ್ನ ಅಜ್ಜಿ ನಮ್ಮ ಮನೆಯಲ್ಲಿಯೇ ವಾಸವಿದ್ದರು. ನನ್ನ ಅಜ್ಜಿಗೆ ರೇಷನ್ ಕಾರ್ಡ್ ಇತ್ತು ಅದನ್ನು ಹಾಳು ಮಾಡಿಕೊಂಡಿದ್ದಾರೆ. ನನ್ನ ಅಜ್ಜಿ ಬದುಕಿದ್ದಾಗ ಸರ್ಕಾರದಿಂದ ಕೊಡುತ್ತಿದ್ದ ದವಸ ಧಾನ್ಯಗಳನ್ನು ತೆಗೆದುಕೊಳ್ಳುತ್ತಿರಲಿಲ್ಲ. ನಾನು ಮತ್ತು ನನ್ನ ಅಜ್ಜಿ ಒಟ್ಟಾಗಿ ವಾಸ ಮಾಡುತ್ತಿದ್ದ ಸಂಬಂಧ ರೇಷನ್ ಕಾರ್ಡ್ ಇತ್ತು. ಪುನಃ ಅರ್ಜಿ ಸಲ್ಲಿಸಿ ರೇಷನ್ ಕಾರ್ಡ್ ಪಡೆದುಕೊಂಡಿಲ್ಲ. ಕುಳ್ಳಮ್ಮ ಮೂಲತಃ ಬೆಣಗಾಲು ಗ್ರಾಮದವರು. ಕುಳ್ಳಮ್ಮ ಕೂಲಿ ಕೆಲಸ ಮಾಡುತ್ತಿದ್ದರು. ನನ್ನ ಹುಟ್ಟಿದ ದಿನಾಂಕ 05.04.1989. ನಮ್ಮ ತಂದೆಗೆ ನಾನು ಮತ್ತು ನಮ್ಮ ಅಣ್ಣ ಮಹೇಶ ಇಬ್ಬರೇ ಮಕ್ಕಳು.

ದಾವಾ ಆಸ್ತಿಯ ಸ.ನಂ.6/21. ಸ.ನಂ.6 ರಲ್ಲಿ ಒಟ್ಟು 121 ಎಕರೆ ಜಮೀನು ಇದೆ. ಸ.ನಂ.6/21 ಪಕ್ಕಾ ಪೋಡಿಯಾಗಿದೆ. ಒಟ್ಟುಗೂಡಿಸಿದ ನಂತರ ಸ.ನಂ.6 ಆಗಿದೆ. ಸ.ನಂ.6 ಒಟ್ಟುಗೂಡಿಸಿದ ನಂತರ ಒಟ್ಟು 120 ಎಕರೆ 11 ಗುಂಟೆ ಇದೆ ಎಂದರೆ ಸರಿ. ಸ.ನಂ.6 ರಲ್ಲಿ ಕುಳ್ಳಮ್ಮನವರ ಜಮೀನು ಹೊರತುಪಡಿಸಿ ನಮಗೆ ಬೇರೆ ಯಾವುದೇ ಜಮೀನು ಇರುವುದಿಲ್ಲ. ಸುಬ್ರಮಣಿ ಮತ್ತು ರಂಗಸ್ವಾಮಿರವರ ವಿರುದ್ಧ ಕೇಸು ಹಾಕಿದ್ದೇನೆ. ಪ್ರತಿವಾದಿಗಳಿಗೆ ಸ.ನಂ.6 ರಲ್ಲಿ ಒಟ್ಟು 4 ಎಕರೆ ಜಮೀನು ಇದೆ ಎಂದರೆ ಗೊತ್ತಿಲ್ಲ. ನಾನು ಹಾಜರುಪಡಿಸಿರುವ ಆರ್.ಟಿ.ಸಿ ಪ್ರಕಾರ ಪ್ರತಿವಾದಿಗಳಿಗೆ ಸ.ನಂ.6 ರಲ್ಲಿ 4 ಎಕರೆ ಜಮೀನು ಇದೆ ಎಂದರೆ ಸರಿ. ನಾಚಮ್ಮ ಕೋಂ ಲೇಟ್ ರಾಮಸ್ವಾಮಿ ಎಂದರೆ ಪ್ರತಿವಾದಿಗಳ ತಾಯಿ ಎಂಬುದು ಸರಿ. ಕಾಳಿಸ್ವಾಮಿ ಎಂಬುವರು ಗೊತ್ತಿಲ್ಲ. ರಾಮಸ್ವಾಮಿ ಎಂಬುವರು ಗೊತ್ತಿಲ್ಲ. ನಾಚಮ್ಮ ಮತ್ತು ಸುಬ್ರಮಣಿ ಬೆಣಗಾಲು ಗ್ರಾಮದಲ್ಲಿ

ವಾಸವಿದ್ದಾರೆ ಎಂದರೆ ಸರಿ. ಪ್ರತಿವಾದಿಗಳ ತಂದೆ ರಾಮಸ್ವಾಮಿ ಕುಳ್ಳಮ್ಮನ ತಮ್ಮ ಎಂದರೆ ಸರಿಯಲ್ಲ. ಪ್ರತಿವಾದಿಗಳು ಬೆಣಗಾಲು ಗ್ರಾಮದ ಸ.ನಂ.6 ರಲ್ಲಿರುವ ಅವರ ಜಮೀನಿನಲ್ಲಿ ಸ್ವಾಧೀನವಿದ್ದಾರೆ ಎಂದರೆ ಸರಿ. ಬೆಣಗಾಲು ಗ್ರಾಮದಲ್ಲಿ ಕುಳ್ಳಮ್ಮನವರಿಗೆ ಪ್ರತ್ಯೇಕ ಮನೆ ಇದೆ. ಅದೇ ಮನೆಯಲ್ಲಿ ಪ್ರತಿವಾದಿಗಳು ವಾಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಈಗ ನಾನು ಇರುವ ಮನೆ ಬಾಡಿಗೆ ಮನೆಯಾಗಿದೆ, ಸಾಕ್ಷಿಯು ಸ್ವತಃ ಹೇಳುವುದೆಂದರೆ ನನ್ನ ಅಜ್ಜಿ ಇದ್ದ ಮನೆ ಬಿದ್ದು ಹೋಗಿದೆ. ಬಿದ್ದು ಹೋಗಿರುವ ನನ್ನ ಅಜ್ಜಿ ಮನೆಯ ಜಂಜರ್ ನಂಬರ್ ಮತ್ತು ಅಸೆಸ್ ಮೆಂಟ್ ನಂಬರ್ ಗೊತ್ತಿಲ್ಲ. ಬಿದ್ದು ಹೋಗಿರುವ ನನ್ನ ಅಜ್ಜಿಯ ಮನೆಯ ಪೂರ್ವಕ್ಕೆ ಚೌಡಯ್ಯನವರ ಜಮೀನು, ಪಶ್ಚಿಮಕ್ಕೆ ರಾಮಯ್ಯನವರ ಮನೆ, ಉತ್ತರಕ್ಕೆ ರಾಜೇಂದ್ರರವರ ಜಾಗ, ದಕ್ಷಿಣಕ್ಕೆ ನಾಚಮ್ಮರವರ ಜಾಗ ಇರುತ್ತದೆ. ಸದರಿ ನಾಚಮ್ಮ ಪ್ರತಿವಾದಿಗಳ ತಾಯಿ ಎಂದರೆ ಸರಿ. ಆ ಮನೆ ಕುಳ್ಳಮ್ಮನವರಿಗೆ ಸ್ವಯಾರ್ಜಿತವಾಗಿ ಬಂದಿದೆ. ನಾನು ಚಿಕ್ಕವನಿದ್ದಾಗಲೇ ಅಂದರೆ ನಾನು 2 ನೇ ತರಗತಿ ಓದುವಾಗಲೇ ಕುಳ್ಳಮ್ಮನ ಮನೆ ಬಿದ್ದು ಹೋಗಿದೆ. ಅಂದಿನಿಂದಲೂ ನಾನು ಬಾಡಿಗೆ ಮನೆಯಲ್ಲಿ ವಾಸವಿದ್ದೇನೆ. ಬಿದ್ದು ಹೋಗಿರುವ ಕುಳ್ಳಮ್ಮನ ಮನೆಯ ಜಾಗದ ಖಾತೆ ಅವರ ಹೆಸರಿನಲ್ಲಿಯೇ ಇದೆ. ಕುಳ್ಳಮ್ಮನ ಜಾಗದ ಖಾತೆಯನ್ನು ನಮ್ಮ ಹೆಸರಿಗೆ ಮಾಡಿಸಿಕೊಳ್ಳಲು ಪ್ರಯತ್ನಿಸಿಲ್ಲ. ನಮ್ಮ ಊರಿನ ಗಣೇಶ ಎಂಬುವರ ಮನೆಯಲ್ಲಿ ಬಾಡಿಗೆಗೆ ವಾಸವಿದ್ದೇವೆ. ದಾವಾ ಸ್ವತ್ತನ್ನು ಮಂಜೂರು ಮಾಡುವ ಕಾಲಕ್ಕೆ ನಾನು ಹುಟ್ಟಿದ್ದೆ ಎಂದರೆ ಸರಿ. ದಾವಾ ಆಸ್ತಿ ಮಂಜೂರಾದ ನಂತರ ಕುಳ್ಳಮ್ಮನವರ ಹೆಸರಿಗೆ ಖಾತೆಯಾಗಿದೆ. ಮಂಜೂರಾದ ನಂತರ ಕುಳ್ಳಮ್ಮನ ಹೆಸರಿಗೆ ಖಾತೆಯಾದ ಬಗ್ಗೆ ಆರ್.ಟಿ.ಸಿ ಮತ್ತು ಮ್ಯುಟೇಷನ್ ಕೊಟ್ಟಿದ್ದೇನೆ. ದಿನಾಂಕ 27.10.1980 ರಲ್ಲಿ ಸಾಗುವಳಿ ಕೊಟ್ಟಿದ್ದಾರೆ. ಮಂಜೂರಾದ ತಕ್ಷಣ ಕುಳ್ಳಮ್ಮನವರ ಹೆಸರಿಗೆ ಖಾತೆಯಾಗಿದೆ ಅದನ್ನು

ನ್ಯಾಯಾಲಯಕ್ಕೆ ಕೊಟ್ಟಿಲ್ಲ. ದಾವಾ ಆಸ್ತಿಯನ್ನು ಕುಳ್ಳಮ್ಮ ಬ್ಯಾಂಕ್ ಗೆ ಅಡಮಾನ ಮಾಡಿ ಸಾಲ ಪಡೆದುಕೊಂಡಿಲ್ಲ ನಾವು ಸಾಲ ಪಡೆದುಕೊಂಡಿದ್ದೇವೆ. ಕುಳ್ಳಮ್ಮ ಕೂಲಿ ಕೆಲಸ ಮತ್ತು ಕಲ್ಲು ಒಡೆಯುವ ಕೆಲಸ ಮಾಡುತ್ತಿದ್ದರು. ಕುಳ್ಳಮ್ಮ ಬದುಕಿದ್ದವರೆಗೂ ಆರೋಗ್ಯವಾಗಿದ್ದರು. ಅವರಿಗೆ ಕಣ್ಣು ಸರಿಯಾಗಿ ಕಾಣುತ್ತಿತ್ತು. ಕನ್ನಡಕ ಹಾಕುತ್ತಿರಲಿಲ್ಲ. ಕುಳ್ಳಮ್ಮರವರು ಸಾಯುವಾಗ ಎಷ್ಟು ವರ್ಷ ಆಗಿತ್ತು ಎಂದರೆ 97–98 ಆಗಿತ್ತು, ಸಾಕ್ಷಿಯು ಮುಂದುವರಿದು ಸರಿಯಾಗಿ ಎಷ್ಟು ವರ್ಷ ಆಗಿತ್ತು ಎಂದು ಗೊತ್ತಿಲ್ಲ. ಕುಳ್ಳಮ್ಮನ ಗಂಡ ತಿಮ್ಮಯ್ಯ ಯಾವಾಗ ತೀರಿಕೊಂಡರು ಎಂದು ಗೊತ್ತಿಲ್ಲ ಅವರನ್ನು ನಾನು ನೋಡಿರಲಿಲ್ಲ. ಅವರು ನಾನು ಹುಟ್ಟುವದಕ್ಕಿಂತ ಮೊದಲೇ ತೀರಿಕೊಂಡಿದ್ದರು. ಬೆಣಗಾಲು ಗ್ರಾಮದಲ್ಲಿ ಭೋವಿ ಕಾಲೋನಿ ಇದೆ. ಆ ಕಾಲೋನಿಯಲ್ಲಿ 80 ಕ್ಕಿಂತ ಹೆಚ್ಚು ಮನೆಗಳಿವೆ. ಸದರಿ ಭೋವಿ ಕಾಲೋನಿ ಮೊದಲು ಸರ್ವೆ ನಂಬರ್ ನಲ್ಲಿತ್ತು ಈಗ ಗ್ರಾಮ ಠಾಣೆಯಾಗಿದೆ. ಮೊದಲು ಸ.ನಂ.22 ಮತ್ತು 23 ರಲ್ಲಿ ಇತ್ತು.

**ಪಾಟೀ ಸವಾಲು ವಕೀಲರ ಕೋರಿಕೆಯ ಮೇರೆಗೆ ಮುಂದೂಡಲಾಯಿತು**

***(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು)***

***ಓ.ಹೆ.ಕೆ.ಸರಿ ಇದೆ.***

***ಹಿ.ಸಿ.ನ್ಯಾ ಮತ್ತು ಪ್ರ.ದ.ನ್ಯಾದಂ.***
**ಪಿರಿಯಾಪಟ್ಟಣ**